ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಸಾಧನಾಪ್ರವಾಸ : ಖಂಡ ೧

# ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆ ಇವರು ಗುರುಗಳಿಂದ ಕಲಿಯುವುದು

(Learnings of Sachchidanand Parabrahman (Dr) Athavale from His Guru)

ಕನ್ನಡ (Kannada)

**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

(‘ಸಚ್ಚಿದಾನಂದ ಪರಬ್ರಹ್ಮ’ ಬಿರುದಿನ ಸ್ಪಷ್ಟೀಕರಣವನ್ನು ‘ಪುಟ ೨೬’ ರಲ್ಲಿ ಓದಿ.)

**ಸನಾತನ ಸಂಸ್ಥೆ**

ಸೆಪ್ಟೆಂಬರ್ ೨೦೨೨ ರವರೆಗೆ ಸನಾತನದ ೩೫೭ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಪಂಜಾಬಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೯೦,೭೩,೦೦೦ ಪ್ರತಿಗಳು !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಕು. ಭಾವಿನಿ ಕಾಪಡಿಯಾ ಮತ್ತು ಕು. ಸಿದ್ಧಿ ಕ್ಷತ್ರಿಯ

**First Edition** : Deepavali, Kaliyug Varsh 5124
(26th October 2022)

Translated from the original Marathi text 'Paratpar Guru Dr. Jayanth Athavale Yanchi Gurubhet ani tyanni Gurunkadun Shikne'
ಪ್ರಸ್ತುತ ಗ್ರಂಥವು ಹಿಂದಿ ಭಾಷೆಯಲ್ಲೂ ಲಭ್ಯವಿದೆ.

**ಅನುವಾದಕರು** : ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು 560 010.

**ದೇಣಿಗೆ ಮೌಲ್ಯ** : ₹ 100/-

**ISBN :** 978-93-92952-08-1 ॐ ಗ್ರಂಥ ಕ್ರ. : 357

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ವಿಷಯಸೂಚಿ

೧. ಡಾ. ಜಯಂತ ಆಠವಲೆಯವರ ಗುರು ಪ.ಪೂ. ಭಕ್ತರಾಜ ಮಹಾರಾಜರ ಸಂಕ್ಷಿಪ್ತ ಪರಿಚಯ ೬

೨. ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಸಂಕ್ಷಿಪ್ತ ಪರಿಚಯ ೮

೩. ಯುಗಪ್ರವರ್ತಕ ಪರಾತ್ಪರ ಗುರು ಡಾ. ಜಯಂತ ಆಠವಲೆ ಇವರ ಅಲೌಕಿಕ ಚರಿತ್ರೆಯಿರುವ ವೈಶಿಷ್ಟ್ಯಪೂರ್ಣ ಗ್ರಂಥಮಾಲಿಕೆ ! ೧೨

೪. 'ಪರಾತ್ಪರ ಗುರು ಡಾ. ಆಠವಲೆಯವರ ಸಾಧನಾಪ್ರವಾಸ' ಎಂಬ ಮಾಲಿಕೆ ಎಂದರೆ 'ಆದರ್ಶ ಸಾಧಕ'ನಾಗಲು ಬೋಧಾಮೃತ ! ೧೯

೫. ಪ್ರಸ್ತುತ ಗ್ರಂಥದ ಬರಹಗಳ ಪುನರಾವರ್ತನೆಯ ಅನಿವಾರ್ಯತೆ ! ೨೪

೬. ಗ್ರಂಥದಲ್ಲಿನ ಕೆಲವು ಸಂಬೋಧನೆಗಳು ಮತ್ತು ಬಿರುದುಗಳ ಸ್ಪಷ್ಟೀಕರಣ ೨೫

---

## ಗ್ರಂಥದ ಅನುಕ್ರಮಣಿಕೆ

(ಅಧ್ಯಾಯದಲ್ಲಿನ ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು ಕೆಳಗೆ ಕೊಡಲಾಗಿದೆ.)

**ಅಧ್ಯಾಯ ೧. ಪರಾತ್ಪರ ಗುರು ಡಾ. ಜಯಂತ ಆಠವಲೆಯವರು ಸಾಧನೆಯ ಕಡೆಗೆ ಹೊರಳುವುದು ೨೮**

೧ ಅ. ಪರಾತ್ಪರ ಗುರು ಡಾ. ಆಠವಲೆಯವರು ಮೊದಲು ದೇವರ ವಿಚಾರ ಮಾಡದವರು ಮತ್ತು ಬುದ್ಧಿವಾದಿಗಳಾಗಿದ್ದರು. ೨೮

೧ ಆ. ಪರಾತ್ಪರ ಗುರು ಡಾ. ಆಠವಲೆಯವರಿಗೆ ಸಮ್ಮೋಹನೋಪಚಾರದ ಮಿತಿ ಗಮನಕ್ಕೆ ಬಂದು ಸಾಧನೆಯ ಕಡೆ ಹೊರಳುವುದು ೨೯

**ಅಧ್ಯಾಯ ೨. ಪರಾತ್ಪರ ಗುರು ಡಾ. ಆಠವಲೆಯವರಿಗೆ ಗುರುಪ್ರಾಪ್ತಿಯ ಮೊದಲಿನಿಂದಲೇ ಗುರುಗಳು ಅನೇಕ ಸಂತರ ಮಾಧ್ಯಮದಿಂದ ಅಧ್ಯಾತ್ಮವನ್ನು ಕಲಿಸುವುದು ಮತ್ತು ರಕ್ಷಣೆಯನ್ನು ಮಾಡುವುದು ೩೨**

**ಅಧ್ಯಾಯ ೩. ಗುರುಪ್ರಾಪ್ತಿಯ ಮೊದಲು ಮಾಡಿದ ಅಧ್ಯಾತ್ಮಪ್ರಸಾರ ೩೬**

೩ ಅ. ಪರಾತ್ಪರ ಗುರು ಡಾ. ಆಠವಲೆಯವರು ಅಧ್ಯಾತ್ಮವನ್ನು ಕಲಿಯಲು ೨೫ ಕ್ಕಿಂತ ಹೆಚ್ಚು ಸಂತರ ಬಳಿ ಹೋಗುವುದು ಮತ್ತು ಸಾಧನೆಯನ್ನು ಆರಂಭಿಸುವುದು ೩೬

೩ ಆ. ಡಾ. ಆಠವಲೆಯವರು ಪ್ರಾರಂಭದಲ್ಲಿ ಮಾಡಿದ ಅಧ್ಯಾತ್ಮಪ್ರಸಾರ ೩೬

**ಅಧ್ಯಾಯ ೪. ಪ.ಪೂ. ಅಣ್ಣಾ ಕರಂದೀಕರರು ಡಾ. ಆಠವಲೆಯವರಿಗೆ ಮಾಡಿಸಿದ ಗುರುಗಳ ಭೇಟಿ ! ೪೦**

೪ ಊ. ಡಾ. ಆಠವಲೆಯವರಿಗೆ ಪ.ಪೂ. ಭಕ್ತರಾಜ ಮಹಾರಾಜರಿಂದ ಗುರುಮಂತ್ರ ಸಿಗುವುದು ೪೫

**ಅಧ್ಯಾಯ ೫. ಪರಾತ್ಪರ ಗುರು ಡಾಕ್ಟರರು ಗುರುಗಳಿಂದ ಕಲಿಯುವುದು ೫೦**

೫ ಆ. ಪ.ಪೂ. ಬಾಬಾರವರು ನಾಮಸಾಧನೆಯ ಬಗ್ಗೆ ಕಲಿಸುವುದು ೫೦

೫ ಉ. 'ಗುರು'ಗಳ ಬಗ್ಗೆ ಡಾ. ಆಠವಲೆಯವರು ಕಲಿಯುವುದು ೫೪

೫ ಊ. 'ಗುರು-ಶಿಷ್ಯ'ರ ಸಂದರ್ಭದಲ್ಲಿ ಕಲಿಯುವುದು ೫೭

೫ ಎ. 'ಪರೇಚ್ಛೆ' ಮತ್ತು 'ಈಶ್ವರೇಚ್ಛೆ'ಯ ಬಗ್ಗೆ ಕಲಿಯುವುದು ೫೮

೫ ಒ. ಬಾಬಾರವರು ಅಹಂ ನಿರ್ಮೂಲನೆಯ ಬಗ್ಗೆ ಕಲಿಸುವುದು ೬೦

೫ ಕ. 'ಭಕ್ತರ ವಿಚಾರ ಹೇಗೆ ಮಾಡಬೇಕು ?' ಎಂಬುದನ್ನು ಪ.ಪೂ. ಬಾಬಾರವರು ಕಲಿಸುವುದು ೬೫

೫ ಖ. ಗುರುಬಂಧುಗಳ ಮೇಲೆ ಟೀಕೆಯನ್ನು ಮಾಡಬಾರದು ! ೬೫

೫ ಥ. ಸಾಕ್ಷಿಭಾವದ ಬಗ್ಗೆ ಕಲಿಸುವುದು ೬೮

೫ ಜ. ಅದ್ವೈತದ ಕಡೆಗೆ ಹೋಗಲು ಕಲಿಸುವುದು ೬೯

೫ ಟ. ಪರೋಕ್ಷವಾಗಿ ಕಲಿಸುವುದು ೬೯

**ಅಧ್ಯಾಯ ೬. ಪರಾತ್ಪರ ಗುರು ಡಾ. ಆಠವಲೆಯವರು ಗುರುಚರಣಗಳಲ್ಲಿ ತನು-ಮನ-ಧನವನ್ನು ಅರ್ಪಿಸುವುದು ೭೯**

**ಅಧ್ಯಾಯ ೭. ಪರಾತ್ಪರ ಗುರು ಡಾ. ಆಠವಲೆಯವರಲ್ಲಿ ತಮ್ಮ ಗುರುಪರಿವಾರದಲ್ಲಿನ ಸಂತರೊಂದಿಗಿರುವ ಭಾವಬಂಧನ ೮೬**

**ಅಧ್ಯಾಯ ೮. ಪರಾತ್ಪರ ಗುರು ಡಾ. ಆಠವಲೆಯವರ 'ಅಧ್ಯಾತ್ಮಶಾಸ್ತ್ರ' ಎಂಬ ಮೊದಲ ಗ್ರಂಥದಿಂದ ಬಹಳಷ್ಟು ಚೈತನ್ಯ ಪ್ರಕ್ಷೇಪಿತವಾಗು-ತ್ತಿರುವುದನ್ನು ತೋರಿಸುವ ವೈಜ್ಞಾನಿಕ ಪರೀಕ್ಷಣೆ ೯೦**

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೧೦೦**

## ವಿಷಯಸೂಚಿಯಲ್ಲಿನ ಕ್ರಮಾಂಕ ೪

# ‘ಪರಾತ್ಪರ ಗುರು ಡಾ. ಆಠವಲೆಯವರ ಸಾಧನಾಪ್ರವಾಸ’ ಎಂಬ ಮಾಲಿಕೆ ಎಂದರೆ ‘ಆದರ್ಶ ಸಾಧಕ’ನಾಗಲು ಬೋಧಾಮೃತ !

## ೧. ಗುರುಪ್ರಾಪ್ತಿಯ ನಂತರ ಕೇವಲ ೩-೪ ವರ್ಷಗಳಲ್ಲೇ ‘ಗುರು’ಪದವಿಗೆ ತಲುಪಿದ ಪರಾತ್ಪರ ಗುರು ಡಾ. ಆಠವಲೆ !

‘ಸಾಮಾನ್ಯವಾಗಿ ಗುರುಪ್ರಾಪ್ತಿಯಾದ ನಂತರ ಕೆಲವು ವರ್ಷ ಗುರುಗಳ ಮಾರ್ಗದರ್ಶನಕ್ಕನುಸಾರ ಕಠೋರ ಸಾಧನೆ ಮತ್ತು ಸೇವೆಯನ್ನು ಮಾಡಿದ ನಂತರ ಯಾವುದಾದರೊಬ್ಬ ಶಿಷ್ಯನು ‘ಗುರು’ಪದವಿಯ ಅಧಿಕಾರಿಯಾಗಬಲ್ಲನು. ಪರಾತ್ಪರ ಗುರು ಡಾ. ಆಠವಲೆಯವರು ಮೊದಲು ದೇವರ ಬಗ್ಗೆ ವಿಚಾರ ಮಾಡದವರಾಗಿದ್ದರು, ಆದರೆ ಅಧ್ಯಾತ್ಮದ ಮಹತ್ವ ತಿಳಿದ ನಂತರ ಅವರು ಅಧ್ಯಾತ್ಮಶಾಸ್ತ್ರದ ಅಧ್ಯಯನ ಮತ್ತು ಸಾಧನೆಯನ್ನು ಮಾಡಿದರು. ಅವರ ತಳಮಳದಿಂದ ಅವರಿಗೆ ಶೀಘ್ರ ಗುರುಪ್ರಾಪ್ತಿಯಾಯಿತು. ಅನಂತರ ಗುರುಗಳ ಮಾರ್ಗದರ್ಶನದಲ್ಲಿ ಸಾಧನೆಯನ್ನು ಮಾಡಿ ಅವರು ಕೇವಲ ೩–೪ ವರ್ಷಗಳಲ್ಲೇ ಗುರುಪದವಿಯನ್ನು ತಲುಪಿದರು ! ಇದರಿಂದ ಅವರಲ್ಲಿನ ಉತ್ತಮ ಶಿಷ್ಯನ ದರ್ಶನವಾಗುತ್ತದೆ. ಕೆಲವರಿಗೆ ‘ಇಷ್ಟೊಂದು ಕಡಿಮೆ ಕಾಲಾವಧಿಯಲ್ಲಿ ಅವರು ಗುರುಕೃಪೆಗೆ ಹೇಗೆ ಪಾತ್ರರಾದರು ?’ ಎಂಬ ಕುತೂಹಲವಿರಬಹುದು. ಅವರ ಈ ಕುತೂಹಲವು ಈ ಗ್ರಂಥಮಾಲಿಕೆಯಿಂದ ಶಮನವಾಗುವುದು.

## ೨. ಸಾಧಕರ ಆಧ್ಯಾತ್ಮಿಕ ಉನ್ನತಿ ಚೆನ್ನಾಗಿ ಆಗಲು ಸಾಧನೆಯ ವಿವಿಧ ಅಂಗಗಳನ್ನು ಸೂಕ್ಷ್ಮತೆಯೊಂದಿಗೆ ಕಲಿಸುವ ಗ್ರಂಥಮಾಲಿಕೆ !

ಪುರಂದರದಾಸರು, ರಾಘವೇಂದ್ರಸ್ವಾಮಿಗಳು, ಶಂಕರಾಚಾರ್ಯರಂತಹ ಅನೇಕ ಸಂತರ ಚರಿತ್ರೆಗಳು ಇಂದು ಲಭ್ಯವಿವೆ. ಅವುಗಳಲ್ಲಿ ಅವರ ಲೌಕಿಕ ಜೀವನ, ಸಾಧನಾಮಾರ್ಗ, ಬೋಧನೆ, ಲೀಲೆ, ಭಕ್ತರ ಅನುಭೂತಿ ಇತ್ಯಾದಿಗಳು ಓದಲು ಸಿಗುತ್ತವೆ.

ಪರಾತ್ಪರ ಗುರು ಡಾ. ಆಠವಲೆಯವರ ಆಧ್ಯಾತ್ಮಿಕ ರೂಪುಗೊಳ್ಳುವಿಕೆಯಲ್ಲಿ ‘ಅವರ ಮನಸ್ಸಿನ ವಿಚಾರಪ್ರಕ್ರಿಯೆ ಹೇಗಾಯಿತು ? ಸಣ್ಣಪುಟ್ಟ ಪ್ರಸಂಗಗಳಿಂದಲೂ ಗುರುಗಳು ಅವರಿಗೆ ಹೇಗೆ ಕಲಿಸಿದರು ? ಸಾಧಕಾವಸ್ಥೆಯಲ್ಲಿನ ಮುಂದುಮುಂದಿನ

ಹಂತಗಳಲ್ಲಿ ಅವರ ಸಾಧನೆಯ ದೃಷ್ಟಿಕೋನದಲ್ಲಿ ಹೇಗೆ ಬದಲಾವಣೆಯಾಯಿತು ? ಅವರು ಹಂತಹಂತವಾಗಿ ತನು-ಮನ-ಧನದ ತ್ಯಾಗವನ್ನು ಹೇಗೆ ಮಾಡಿದರು ? ಗುರುಗಳು ಅವರಿಗೆ ಸಮಷ್ಟಿ ಸಾಧನೆಯನ್ನು ಹೇಗೆ ಕಲಿಸಿದರು ?' ಇತ್ಯಾದಿ ಅನೇಕ ಅಂಗಗಳ ಸೂಕ್ಷ್ಮತೆಗಳೊಂದಿಗೆ ಬರೆದಿರುವುದು ಬಹುಶಃ ಬೇರೆಲ್ಲೂ ಸಿಗುವುದಿಲ್ಲ. ಸಾಧಕರಿಗೆ ಈ ಮಾಹಿತಿಯು ಅವರ ಸಾಧನೆಯ ಶೀಘ್ರ ಪ್ರಗತಿಗಾಗಿ ಲಾಭದಾಯಕವಾಗಿದೆ. ಪರಾತ್ಪರ ಗುರು ಡಾಕ್ಟರರ 'ಸಾಧನೆಯ ಪ್ರವಾಸ' ಎಂಬ ಗ್ರಂಥಮಾಲಿಕೆಯಿಂದ ಈ ಉದ್ದೇಶವು ಖಂಡಿತವಾಗಿಯೂ ಸಾಧ್ಯವಾಗುವುದು.

## ೩. ಪರಾತ್ಪರ ಗುರು ಡಾಕ್ಟರರು ಬರೆದ ಸಾಧನಾಪ್ರವಾಸದ ನಿಮಿತ್ತ ಅರಿವಾದ ಅವರ ಕೆಲವು ಗುಣಗಳು !

**೩ ಅ. *ಜಿಜ್ಞಾಸೆ ಮತ್ತು ಸಂಶೋಧಕ ವೃತ್ತಿ* :** ಸಾಮಾನ್ಯವಾಗಿ ಸಾಧಕರು ಅಥವಾ ಶಿಷ್ಯರು ಗುರುಗಳಿಗೆ ಪ್ರಶ್ನೆಗಳನ್ನು ಕೇಳುವುದಿಲ್ಲ, ಕೇವಲ ಅವರು ಹೇಳಿದ್ದನ್ನು ಕೇಳುತ್ತಾರೆ. ಪರಾತ್ಪರ ಗುರು ಡಾಕ್ಟರರು ಗುರ್ವಾಜ್ಞಾಪಾಲನೆಯೊಂದಿಗೆ ಅವರಲ್ಲಿನ ಜಿಜ್ಞಾಸೆಯಿಂದ ಗುರುಗಳಿಗೆ ಅಧ್ಯಾತ್ಮದಲ್ಲಿನ ಅನೇಕ ಪ್ರಶ್ನೆಗಳನ್ನು ಕೇಳಿ ಬಹಳಷ್ಟು ಕಲಿಯುತ್ತಿದ್ದರು. ಅವರಲ್ಲಿನ ಸಂಶೋಧಕ ವೃತ್ತಿಯಿಂದಲೂ ಅವರು ಅಧ್ಯಾತ್ಮದಲ್ಲಿನ ಅನೇಕ ತತ್ತ್ವಗಳನ್ನು ಕಲಿತರು. ಇದರಿಂದ ಅವರು ಸಮಷ್ಟಿಗೆ ಅಧ್ಯಾತ್ಮಶಾಸ್ತ್ರವನ್ನು ಕಲಿಸುವಾಗ ಅವುಗಳನ್ನು ಉಪಯೋಗಿಸಲು ಸಾಧ್ಯವಾಯಿತು.

**೩ ಆ. *ಚಿಂತನಶೀಲ ವೃತ್ತಿ* :** ಪರಾತ್ಪರ ಗುರು ಡಾಕ್ಟರರು ಸಾಧಕಾವಸ್ಥೆಯಲ್ಲಿರುವಾಗ ಪ್ರತಿಯೊಂದು ಪ್ರಸಂಗವನ್ನು ಬುದ್ಧಿಯಿಂದ ವಿಶ್ಲೇಷಣಾತ್ಮಕ ಅಧ್ಯಯನವನ್ನು ಮಾಡುತ್ತಿದ್ದರು, ಹಾಗೆಯೇ ಆ ಸಮಯದಲ್ಲಿ ಅವರು ತಮ್ಮ ಮನಸ್ಸಿನ ಅಧ್ಯಯನ ವನ್ನೂ ಮಾಡುತ್ತಿದ್ದರು. ಇದರಿಂದ ಅವರಿಗೆ ಸಾಧನೆಯ ವಿಭಿನ್ನ ಅಂಗಗಳೂ ಅರ್ಥವಾಗುತ್ತಿದ್ದವು. ಇದರ ಒಂದು ಉದಾಹರಣೆ ಹೀಗಿದೆ. ಪರಾತ್ಪರ ಗುರು ಡಾಕ್ಟರರಿಗೆ ಗುರುಪ್ರಾಪ್ತಿಯ ಮೊದಲಿನಿಂದಲೂ ವಿವಿಧ ಸಂತರು ಅಧ್ಯಾತ್ಮವನ್ನು ಕಲಿಸಿದರು ಮತ್ತು ಅವರನ್ನು ಕೆಟ್ಟ ಶಕ್ತಿಗಳ ತೊಂದರೆಗಳಿಂದ ರಕ್ಷಿಸಿದರು. ಇದರ ಬಗ್ಗೆ ಪರಾತ್ಪರ ಗುರು ಡಾಕ್ಟರರು ಹೀಗೆ ಹೇಳುತ್ತಾರೆ, 'ಸಂತರು ನನಗೆ ಅಧ್ಯಾತ್ಮ ಕಲಿಸುವುದು ಮತ್ತು ನನ್ನನ್ನು ಸಂಕಟಗಳಿಂದ ರಕ್ಷಿಸುವುದು, ಇವೆಲ್ಲವನ್ನೂ ನನ್ನ ಗುರುಗಳೇ ಮಾಡಿದ್ದರು ಎಂಬುದು ನನಗೆ ತುಂಬಾ ವರ್ಷಗಳ ನಂತರ ಒಮ್ಮೆ ಗುರುಗಳು ಸಹಜವಾಗಿ ಹೇಳಿದ ಮುಂದಿನ ವಾಕ್ಯದಿಂದ ತಿಳಿಯಿತು - "ನಿಮ್ಮ ಗುರುಗಳು ಶ್ರೇಷ್ಠರೆಂದು ನೀವು ಇವೆಲ್ಲವನ್ನೂ ಕಲಿತಿರಿ ಮತ್ತು (ಕೆಟ್ಟ ಶಕ್ತಿಗಳಿಂದ) ಬದುಕಿದಿರಿ !"

ಪರಾತ್ಪರ ಗುರು ಡಾಕ್ಟರರ ಇಂತಹ ಚಿಂತನಶೀಲ ವೃತ್ತಿಯ ಅನೇಕ ಉದಾಹರಣೆಗಳನ್ನು ಈ ಗ್ರಂಥಮಾಲಿಕೆಯಲ್ಲಿ ಕೊಡಲಾಗಿದೆ. ಇದರಿಂದ ಸಾಧಕರು 'ಸಾಧನೆಯ ಬಗ್ಗೆ ಹೇಗೆ ಚಿಂತನೆ ಮಾಡಬೇಕು ?' ಎಂಬುದನ್ನು ಉತ್ತಮವಾಗಿ ಕಲಿಯಬಹುದು.

**೩ ಇ. ಪ್ರಾಮಾಣಿಕತೆ :** ಪರಾತ್ಪರ ಗುರು ಡಾಕ್ಟರರು ಗುರುಗಳಿಂದ ಕಲಿತ ಅಂಶಗಳನ್ನು ಬರೆಯುವಾಗ ತಮ್ಮ ಪ್ರತಿಷ್ಠೆಯ ಬಗ್ಗೆ ಏನೂ ವಿಚಾರ ಮಾಡದೇ ಬರೆದಿದ್ದಾರೆ, ಉದಾ. ಗುರುಗಳು ಕೆಲವೊಮ್ಮೆ ಅವರ ಮೇಲೆ ಕಾರಣವಿಲ್ಲದೇ ಸಿಟ್ಟು ಮಾಡುತ್ತಿದ್ದರು ಎಂಬುದನ್ನೂ ಅವರು ಪ್ರಾಮಾಣಿಕತೆಯಿಂದ ಬರೆದಿದ್ದಾರೆ.

**೩ ಈ. ವಿಷಯಗಳನ್ನು ತತ್ಪರತೆಯಿಂದ ಬರೆದಿಡುವುದು :** ೨೦೧೧ರಲ್ಲಿ ಒಂದು ಸಲ ನಾನು ಪರಾತ್ಪರ ಗುರು ಡಾಕ್ಟರರ ಕೋಣೆಗೆ ಸೇವೆಯಲ್ಲಿನ ಸಂದೇಹಗಳನ್ನು ಕೇಳಲು ಹೋಗಿದ್ದೆ. ಆಗ ಅವರು ಸ್ನಾನಕ್ಕೆ ಹೋಗುವಾಗ ಕಾಗದ-ಲೇಖನಿಯನ್ನು ಜೊತೆಗೆ ತೆಗೆದುಕೊಂಡು ಹೋಗುತ್ತಿದ್ದರು. ಇದರ ಬಗ್ಗೆ ನನಗೆ ಆಶ್ಚರ್ಯವೆನಿಸಿತು, ಇದು ಅವರಿಗೆ ತಿಳಿದಾಗ ಅವರು ನನಗೆ “ಸ್ನಾನ ಮಾಡುವಾಗ ಏನಾದರೂ ಹೊಳೆದರೆ ಕೂಡಲೇ ಬರೆದಿಟ್ಟುಕೊಳ್ಳುತ್ತೇನೆ, ಇಲ್ಲದಿದ್ದರೆ ನಂತರ ಮರೆತುಹೋಗುತ್ತದೆ” ಎಂದರು. ಪರಾತ್ಪರ ಗುರು ಡಾಕ್ಟರರಲ್ಲಿ 'ತತ್ಪರತೆಯಿಂದ ವಿಷಯಗಳನ್ನು ಬರೆದಿಟ್ಟುಕೊಳ್ಳುವ' ಗುಣವು ಹುಟ್ಟಿನಿಂದಲೇ ಇರುವುದರಿಂದ ಸಾಧನೆಯನ್ನು ಆರಂಭಿಸಿದಾಗಿನಿಂದ ಅವರ ಸಾಧನೆಯ ಪ್ರವಾಸದಲ್ಲಿ ವಿವಿಧ ಹಂತಗಳಲ್ಲಿ ಕಲಿಯಲು ಸಿಕ್ಕಿದ ವಿಷಯಗಳು, ಈಶ್ವರನು ಸ್ಫುರಿಸಿದ ವಿವಿಧ ವಿಷಯಗಳಲ್ಲಿನ ಜ್ಞಾನ ಇತ್ಯಾದಿಗಳನ್ನು ಅವರು ಕೂಡಲೇ ಬರೆದಿಟ್ಟುಕೊಳ್ಳುತ್ತಾರೆ. ಇದರಿಂದ ಸಮಷ್ಟಿಗೆ ಅಧ್ಯಾತ್ಮದ ನಾವೀನ್ಯಪೂರ್ಣ ಜ್ಞಾನ ಸಿಗುತ್ತಿದೆ.

## ೪. 'ಸಾಧನಾಪ್ರವಾಸ' ಎಂಬ ಗ್ರಂಥಮಾಲಿಕೆಯ ಕೆಲವು ವೈಶಿಷ್ಟ್ಯಗಳು !

**೪ ಅ. ಅಧ್ಯಾತ್ಮಶಾಸ್ತ್ರವನ್ನು ಪರಿಚಯಿಸುವ ಚರಿತ್ರೆ :** ಸಾಮಾನ್ಯವಾಗಿ ಚರಿತ್ರೆಯನ್ನು ಇತಿಹಾಸ ಅಥವಾ ಕಥೆಗಳ ಸ್ವರೂಪದಲ್ಲಿ ಬರೆಯಲಾಗುತ್ತದೆ. ಪರಾತ್ಪರ ಗುರು ಡಾಕ್ಟರರು ತಮ್ಮ ಗುರುಗಳನ್ನು 'ತತ್ತ್ವ'ವೆಂದು ನೋಡುತ್ತಿದ್ದುದರಿಂದ ಪರಾತ್ಪರ ಗುರು ಡಾಕ್ಟರರು ಗುರುಗಳ ಮಾರ್ಗದರ್ಶನದಲ್ಲಿ ಆಗಿರುವ ತಮ್ಮ ಸಾಧನೆಯ ಪ್ರವಾಸವನ್ನು 'ಶಾಸ್ತ್ರ'ವೆಂದು ಬರೆದಿದ್ದಾರೆ.

**೪ ಆ. ವಿಷಯ ಸರಿಯಾಗಿ ತಿಳಿಯಲು ಕಾಲದ ಕ್ರಮಕ್ಕಿಂತ ವಿಷಯಗಳಿಗನುಸಾರ ಚರಿತ್ರೆಯ ಮಂಡಣೆ :** ಸಾಮಾನ್ಯವಾಗಿ ಚರಿತ್ರೆಯನ್ನು ಕಾಲದ

ಕ್ರಮದಲ್ಲಿ ಬರೆಯುವ ರೂಢಿಯಿದೆ. ಪರಾತ್ಪರ ಗುರು ಡಾಕ್ಟರರು ತಮ್ಮ ಸಾಧನೆಯ ಪ್ರವಾಸವನ್ನು ಮುಖ್ಯವಾಗಿ 'ಸಾಧಕರಿಗೆ ಸಾಧನೆಯ ವಿವಿಧ ಅಂಗಗಳು ಸುಯೋಗ್ಯವಾಗಿ ಮತ್ತು ಸ್ಪಷ್ಟವಾಗಿ ಕಲಿಯಲು ಸಿಗಬೇಕು' ಎಂಬ ಉದ್ದೇಶದಿಂದ ಬರೆದಿದ್ದಾರೆ. ಆದ್ದರಿಂದ ಅವರು ತಮ್ಮ ಜೀವನದಲ್ಲಿನ ಪ್ರಸಂಗಗಳು, ಕಾಲಕಾಲಕ್ಕೆ ಕಲಿಯಲು ಸಿಕ್ಕಿದ ಅಂಶಗಳು ಇತ್ಯಾದಿಗಳನ್ನು ಯಥಾವತ್ತಾಗಿ ಕಾಲದ ಕ್ರಮದಲ್ಲಿ ಬರೆಯದೇ ಹೆಚ್ಚಾಗಿ ಆಯಾ ವಿಷಯಗಳಿಗನುಸಾರ ಬರೆದಿದ್ದಾರೆ.

## ೫. ಸಾಧಕರ ಅಂತಃಕರಣದಲ್ಲಿ ಸಾಧನೆಯ ಬೋಧನೆಯನ್ನು ಆಳವಾಗಿ ಬಿಂಬಿಸುವ ಗ್ರಂಥಮಾಲಿಕೆ !

ಪರಾತ್ಪರ ಗುರು ಡಾಕ್ಟರರು ಗುರುಗಳಿಂದ ಏನು ಕಲಿಯುತ್ತಿದ್ದರೋ, ಅದನ್ನು ಸ್ವತಃ ಖಂಡಿತವಾಗಿ ಆಚರಣೆಯಲ್ಲಿ ತರುತ್ತಿದ್ದರು, ಅಷ್ಟೇ ಅಲ್ಲದೇ ಸಾಧಕರಿಂದಲೂ ಆ ರೀತಿ ಆಚರಣೆಯನ್ನು ಮಾಡಿಸಿಕೊಳ್ಳುತ್ತಿದ್ದರು. ಇದರ ಒಂದು ಉದಾಹರಣೆ ಹೀಗಿದೆ. ಒಂದು ಸಲ ಪರಾತ್ಪರ ಗುರು ಡಾಕ್ಟರರು ಗುರುಗಳ ಆಶ್ರಮಕ್ಕೆ ಹೋಗಿರುವಾಗ ಗುರುಗಳು ಅವರಿಗೆ "ಆಶ್ರಮದ ಸ್ವಚ್ಛತೆ ಮಾಡಿ" ಎಂದು ಹೇಳಿದರು. ಈ ರೀತಿ ಮಾಡಿದಾಗ ಪರಾತ್ಪರ ಗುರು ಡಾಕ್ಟರರ ಮನಸ್ಸಿನಲ್ಲಿ ಮೊದಲ ಬಾರಿಗೆ 'ನಮ್ಮ ಆಶ್ರಮ' ಎಂಬ ಭಾವನೆ ನಿರ್ಮಾಣವಾಯಿತು. ಅನಂತರ ಮುಂದೆ ಪ್ರತಿ ಸಲ ಪರಾತ್ಪರ ಗುರು ಡಾಕ್ಟರರು ಗುರುಗಳ ಆಶ್ರಮಕ್ಕೆ ಅಥವಾ ಗುರುಪೂರ್ಣಿಮೆ ಇತ್ಯಾದಿ ಉತ್ಸವಗಳಿಗೆ ಹೋದಾಗ ಅಲ್ಲಿ ಸ್ವಚ್ಛತೆ ಮತ್ತು ವಸ್ತುಗಳನ್ನು ವ್ಯವಸ್ಥಿತವಾಗಿಡುವ ಸೇವೆಯನ್ನು ಅವಶ್ಯವಾಗಿ ಮಾಡುತ್ತಿದ್ದರು. ಕೆಲವು ಕಾಲದ ನಂತರ ಪರಾತ್ಪರ ಗುರು ಡಾಕ್ಟರರು ಸನಾತನದ ಆಶ್ರಮಗಳನ್ನು ನಿರ್ಮಿಸಿದರು. ಅಲ್ಲಿ ಸಾಧಕರಲ್ಲೂ ಅವರು ಈ ಗುಣವನ್ನು ಬಿಂಬಿಸಿದರು.

ಸಂತರು ಅಥವಾ ಗುರುಗಳಿಂದ ಕಲಿತಿರುವುದನ್ನು ಯಥಾವತ್ತಾಗಿ ಆಚರಣೆಯಲ್ಲಿ ತರುವವನೇ ನಿಜವಾದ ಸತ್‌ಶಿಷ್ಯ ! ಪರಾತ್ಪರ ಗುರು ಡಾಕ್ಟರರು ಸತ್‌ಶಿಷ್ಯರಾಗಿರುವುದರಿಂದಲೇ ಕಡಿಮೆ ಕಾಲಾವಧಿಯಲ್ಲಿಯೇ ಗುರುಕೃಪೆಗೆ ಪಾತ್ರರಾಗಿ ಮುಂದೆ 'ಪರಾತ್ಪರ ಗುರು'ಗಳಂತಹ ಉಚ್ಚ ಆಧ್ಯಾತ್ಮಿಕ ಸ್ಥಿತಿಯನ್ನು ಪ್ರಾಪ್ತಮಾಡಿಕೊಂಡರು. ಇಂತಹ ಶ್ರೇಷ್ಠ ವಿಭೂತಿಯ ವಾಣಿ ಮತ್ತು ಬರಹಗಳಲ್ಲಿ ಸ್ವಾಭಾವಿಕವಾಗಿಯೇ ಚೈತನ್ಯ ಬರುತ್ತದೆ. ಪರಾತ್ಪರ ಗುರು ಡಾಕ್ಟರರ 'ಸಾಧನೆಯ ಪ್ರವಾಸ' ಎಂಬ ಮಾಲಿಕೆಯೂ ಚೈತನ್ಯದಾಯಕವಾಗಿದೆ; ಆದ್ದರಿಂದ ಅದು ಸಾಧಕರ ಅಂತಃಕರಣದಲ್ಲಿ ಸಾಧನೆಯ ಬೋಧನೆಯನ್ನು ಆಳವಾಗಿ ಬಿಂಬಿಸುವಂತಹದ್ದಾಗಿದೆ.

## ೬. ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !

'ಪರಾತ್ಪರ ಗುರು ಡಾಕ್ಟರರ ಸಾಧನೆಯ ಪ್ರವಾಸ' ಎಂಬ ಗ್ರಂಥಮಾಲಿಕೆಯ ಅಧ್ಯಯನದಿಂದ ಎಲ್ಲ ಜಿಜ್ಞಾಸು ಮತ್ತು ಸಾಧಕರಿಗೆ ಸಾಧನೆಯ ಸ್ಫೂರ್ತಿ ದೊರೆತು ಅವರಿಗೆ ಗುರುಗಳ ಮಾರ್ಗದರ್ಶನದಲ್ಲಿ ಸಾಧನೆಯನ್ನು ಮಾಡಿ ಈಶ್ವರಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಾಗಲಿ' ಎಂದು ಶ್ರೀ ಗುರುಚರಣಗಳಲ್ಲಿ ಮನಃಪೂರ್ವಕ ಪ್ರಾರ್ಥನೆ !'



– (ಪೂ.) ಶ್ರೀ. ಸಂದೀಪ ಆಳಶಿ, ಸನಾತನದ ಗ್ರಂಥಗಳ ಸಂಕಲನಕಾರರು (೧೭.೬.೨೦೨೨)

## ಅಖಿಲ ಮಾನವಜಾತಿಯ ಉದ್ಧಾರ ಮಾಡುವ ಸನಾತನದ ಗ್ರಂಥಸಂಪತ್ತು !

- 'ಅಧ್ಯಾತ್ಮವು ಚಿರಂತನವಾಗಿ ಉಳಿಯುವ ಏಕೈಕ ಶಾಸ್ತ್ರವಾಗಿದೆ' ಎಂಬ ಸಿದ್ಧಾಂತ ವನ್ನು ಇಂದಿನ ವಿಜ್ಞಾನಯುಗದಲ್ಲೂ ನಿರ್ಭಯವಾಗಿ, ಸ್ಪಷ್ಟವಾಗಿ ಹೇಳುವ ಲೇಖನ !
- ಬುದ್ಧಿವಾದಿಗಳ ಬುದ್ಧಿಯ ಮೇಲಿನ ಅಹಂಕಾರದ ಆವರಣವನ್ನು ದೂರ ಮಾಡಿ ಅವರನ್ನು ಚಿರಂತನವಾಗಿರುವ ಆನಂದದೆಡೆಗೆ ಕರೆದೊಯ್ಯುವ ವಿವೇಚನೆ !
- ಅಧ್ಯಾತ್ಮಶಾಸ್ತ್ರದ ಅಧ್ಯಯನದಿಂದ ಪ್ರತಿಯೊಬ್ಬ ವ್ಯಕ್ತಿಯ ಐಹಿಕ ಮತ್ತು ಪಾರಮಾರ್ಥಿಕ ಪ್ರಗತಿಯಾಗಲು ಹಾಗೂ ಸಂಪೂರ್ಣ ವಿಶ್ವದಲ್ಲಿ ಸುಖ, ಶಾಂತಿ ಮತ್ತು ನೆಮ್ಮದಿ ನೆಲೆಸುವುದಕ್ಕಾಗಿ ಮಾರ್ಗದರ್ಶನ !
- ಗ್ರಂಥದಲ್ಲಿನ ಸತ್ತ್ವಗುಣೀ ವಿಚಾರಗಳಿಂದ ವಾಯುಮಂಡಲದಲ್ಲಿ ಬ್ರಾಹ್ಮತೇಜ ಮತ್ತು ಕ್ಷಾತ್ರತೇಜಯುಕ್ತ ವಿಚಾರಗಳ ಪ್ರಕ್ಷೇಪಣೆ !
- ಈಶ್ವರೀ ತತ್ತ್ವದ ರೂಪದಲ್ಲಿರುವ ಶಬ್ದಗಳನ್ನು ಪ್ರಮಾಣವೆಂದು ಪರಿಗಣಿಸಿ ಗ್ರಂಥ ಗಳನ್ನು ಬರೆದಿರುವುದರಿಂದ ಒಂದು ರೀತಿ ಈಶ್ವರನ ಸಾಕ್ಷಿಯಲ್ಲಿ ಗ್ರಂಥಗಳ ನಿರ್ಮಿತಿ !
- ಜ್ಞಾನದಲ್ಲಿನ ಈಶ್ವರನ ಚೈತನ್ಯ ಹಾಗೂ ಆನಂದ ಮತ್ತು ಶಾಂತಿಯ ಅನುಭೂತಿಗಳನ್ನು ನೀಡುವ ಸಾಹಿತ್ಯ !

**– ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ**